ಅಧ್ಯಕ್ಷರು.—ಪ್ರಯೋಜನ ಹೇಗೆ ಆಗಬೇಕು ಎಂದು ಹೇಳುತ್ತೀನೆ. ಈ ತರಹ ಎದ್ದು ಎದ್ದು ಮಾತನಾಡುವುದು ಸರಿಯಲ್ಲ. ನೀವು ಹೀಗೆ ಮಾಡಿದರೆ ಇನ್ನು ಮುಂದೆ ಖಿಖಿನೇ ನಿಯಮದ ಪ್ರಕಾರ ಪ್ರಸ್ತಾಪಿಸುವ ವಿಷಯವನ್ನು ಎರಡು ಅಥವಾ ಮೂರು ಇಡುತ್ತೀನೆ. ಕಾಲು ಕರೆದು ಜಗಳ ತೆಗೆಯುವ ಕೆಲಸ ನಿಮ್ಮದು. ಮಂತ್ರಿಗಳ ಹತ್ತಿರ ಉತ್ತರ ತರಿಸಿಕೊಡುತ್ತೀನೆ ಎಂದು ಹೇಳುತ್ತಿದ್ದೀನೆ ಉತ್ತರ ತರಿಸಿಕೊಡುತ್ತೀನೆ ಎಂದು ಅವರು ಹೇಳುತ್ತಾರೆ. ೮-೧೦ ದಿವಸದ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕಳುಹಿಸಿಕೊಡುತ್ತಾರೆ.

ಶ್ರೀ ಯಂ. ಭೂಪತಿ.—ಒಂದು ವರ್ಷವಾದರೂ ಉತ್ತರ ಕಳುಹಿಸಿಲ್ಲ. ನಾವು ಹೇಳಿದರೆ ನಮಗೇ ಕುಳಿತುಕೊಳ್ಳಿ ಎಂದು ದಬಾಯಿಸುತ್ತೀರಿ.

ಅಧ್ಯಕ್ಷರು.—ಮತ್ತೇನು ಮಾಡಬೇಕು ? ಸ್ಪೀಕರ್ ಎದ್ದುನಿಂತಾಗ ನೀವು ಕುಳಿತುಕೊಳ್ಳಬೇಕೆ ಎಂಬ ರೂಲ್ಸ್ ಗೊತ್ತಿಲ್ಲ ನಿಮಗೆ. ಅಷ್ಯೂರೆನ್ಸ್ ಕಮಿಟಿ ಎಂದು ಇದೆ. ಅವರು ೮ ದಿವಸಕ್ಕೊಮ್ಮೆ ೧೦ ದಿವಸಕ್ಕೊಮ್ಮೆ ವಿಂಟಿಂಗ್ ಕರೆಯುತ್ತಾರೆ. ಯಾವಯಾವ ಮಂತ್ರಿಗಳಿಂದ ಉತ್ತರ ಬಂದಿಲ್ಲವೋ ಅದನ್ನು ಪತ್ರ ಬರೆದು ತರಿಸಿಕೊಳ್ಳಿ ಎಂದು ಕಮಿಟಿಯವರಿಗೆ ಹೇಳಿದ್ದೇನೆ ಅಷ್ಯೂರೆನ್ಸ್ ಕಮಿಟಿಯವರು ಅದನ್ನು ಮಾಡಬೇಕು. ಆದರಲ್ಲಿ ಈ ಪಾರ್ಟಿಯವರು ಮಂತ್ರಿ, ಆ ಪಾರ್ಟಿಯವರು ಇಬ್ಬರೂ ಇರುತ್ತಾರೆ. ನಿಮ್ಮ ಕೆಲಸ ನೀವು ಮಾಡಬೇಕು.

ಶ್ರೀ ಯು. ಭೂಪತಿ.—ಆ ರೀತಿ ಮಾಡಿದರೆ ನಾವು ಶಾಸಕರಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಪೋಸ್ಟ್ ಮಾಸ್ಟರ್ ಆಗಿಬಿಡುತ್ತೇವೆ. ಏನು ಸ್ವಾಮಿ ನಮ್ಮನ್ನೆ ಮಾತನಾಡುತ್ತೀರಿ. ನಮ್ಮಂಥವರ ಸಹಾಯಕ್ಕೆ ನೀವು ಬರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ದುಡ್ಡಿಲ್ಲ ಎಂದು ಹೇಳುತ್ತಾರೆ ಕಳೆದ ಆರು ತಿಂಗಳಿಂದ. ಅಷ್ಯೂರೆನ್ಸ್ ಕಮಿಟಿಯವರು ಏನು ಮಾಡುತ್ತಾರೆ ? ದುಡ್ಡಿಲ್ಲದಿರುವುದರಿಂದ ಪೇಮೆಂಟ್ ಆಗಿಲ್ಲ.

ಅಧ್ಯಕ್ಷರು.—ಮಾನ್ಯ ಇದಿನಬ್ಬ, ಅವರೇ ನಿಮ್ಮದು ಕೇಳಿ.

ಮಂಗಳೂರು ಸಮೀಪದ ಬೇಂಗ್ರೆ ಪ್ರದೇಶ ಯಾವ ಸ್ಥಳೀಯ ಸಂಸ್ಥೆಗೂ ಸೇರ್ಪಡೆಯಾಗದಿರುವುದು

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಸನ್ಮಾನ್ಯ ಅಧ್ಯಕ್ಷರೆ, ಮಂಗಳೂರು ಸಮೀಪದ ಬೇಂಗ್ರೆ ಎಂಬ ಪ್ರದೇಶ ಈವರೆಗೂ ಯಾವುದೇ ಸ್ಥಳೀಯ ಸಂಸ್ಥೆಯಲ್ಲಿ ಸೇರ್ಪಡೆಯಾಗದೆ ಬೇರೆಯಾಗಿಯೇ ಇದೆ. ಇಲ್ಲಿ ಮುಂಡಲ ಪಂಚಾಯಿತಿ ಇಲ್ಲ. ಮಹಾನಗರ ಪಾಲಿಕೆಯಲ್ಲೂ ಇಲ್ಲ. ಸುಮಾರು ೫ ಸಾವಿರದಷ್ಟು ಜನಸಂಖ್ಯೆ ಇರುವ ಈ ಪ್ರದೇಶ ಅಭಿವೃದ್ಧಿ ಕಾರ್ಯಗಳಿಲ್ಲದೆ ತುಂಬಾ ತೊಂದರೆಯಲ್ಲಿದೆ. ಈ ಪ್ರದೇಶವನ್ನು ಮಂಗಳೂರು ಮಹಾನಗರ ಪಾಲಿಕೆಗೆ ಶೀಘ್ರ ಸೇರಿಸುವಂತಾಗಬೇಕು. ಅಲ್ಲಿನ ಜನರು ಖಾಯಂ ಆಗಿ ಅಲ್ಲಿ ವಾಸಿಸುವ ಬಗ್ಗೆ ಭರವಸೆ, ಇನ್ನಿತರ ಸೌಕರ್ಯಗಳು ಒದಗಿಸಬೇಕು. ಈ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ,

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೆ, ಬೇಂಗ್ರೆ ಪ್ರದೇಶವನ್ನು ಮಂಗಳೂರು ಮಹಾ ನಗರಪಾಲಿಕೆಯ ಪರಿಮಿತಿಯೊಳಗೆ ಸೇರಿಸುವ ಬಗ್ಗೆ ಸರ್ಕಾರವು ಈಗಾಗಲೇ ದಿನಾಂಕ ೧೫-೯-೧೯೮೭ರಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನೂ ಹಾಗೂ ಸಲಹೆಗಳನ್ನೂ ಸರ್ಕಾರಕ್ಕೆ ಕಳುಹಿಸಲು ಕೋರಲಾಗಿದೆ. ಸದರಿ ವಿಷಯದಲ್ಲಿ ಆಕ್ಷೇಪಣೆಗಳು ಮತ್ತು ಸಲಹೆಗಳೂ ಬಂದಿವೆ. ಇದರ ಬಗ್ಗೆ ಮಂಗಳೂರು ಮಹಾನಗರ ಸಭೆಯಂ ಆಯುಕ್ತರಿಂದ ಅಭಿಪ್ರಾಯವನ್ನು ಕೇಳಲಾಗಿದೆ. ಅವರಿಂದ ಉತ್ತರವು ಬಂದನಂತ ಪರಿಶೀಲಿಸಿ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ಕ್ರಮ ತೆಗೆದುಕೊಳ್ಳಲಾಗುವುದು.